# ತಹಶೀಲ್ದಾರರ ನ್ಯಾಯಾಲಯ ಹಗರಿಬೊಮ್ಮನಹಳ್ಳಿ

ನಂ/ಕಂ/ಪಹಣಿ/ವಿವಾದ/05/2016-17;

ದಿನಾಂಕ: 23.09.2016.

**ವಾದಿ**

ಕೆ ಬಾಬುಸಾಬ್

ತಂದೆ ಲೇಟ್ ಕೆ ಇಮಾಮ್ ಸಾಬ್

ಬಲ್ಲಾಹುಣ್ಸಿ ಗ್ರಾಮ, ಹಗರಿಬೊಮ್ಮನಹಳ್ಳಿ(ತಾ)

**ಪ್ರತಿವಾದಿ**

1.ಬಸಯ್ಯ ತಂದೆ ಪೋರಯ್ಯ

#3/8ಎ,ವಾರ್ಡ ನಂ.2, ಬೆಟಗೇರ ಗ್ರಾಮ

ಕೊಪ್ಪಳ(ತಾ & ಜಿ)

2.ಅನಸೂಯಮ್ಮ ಗಂಡ ದೊಡ್ಡಯ್ಯ

ಆನೇಕಲ್ಲು ಗ್ರಾಮ, ಹ.ಬೊ.ಹಳ್ಳಿ (ತಾ)

ಉಪಸ್ಥಿತರು:**ಕೆ.ಬಿ.ಆನಂದಪ್ಪನಾಯಕ್,** ಕ.ಆ.ಸೇ

**ತಹಶೀಲ್ದಾರರು**

**ಹಗರಿಬೊಮ್ಮನಹಳ್ಳಿ**

ವಿಷಯ:-ಹಗರಿಬೊಮ್ಮನಹಳ್ಳಿ ತಾಲೂಕು ಆನೇಕಲ್ಲು ಗ್ರಾಮದ ಸರ್ವೆ ನಂ.96/ಬಿ,ವಿ: 04.05 ಎಕರೆ ಜಮೀನನ್ನು ಡಾ.ನಂ.ಹೆಚ್.ಬಿ.ಹೆಚ್.1.00059/2016.17; ದಿ:05.04.2016ರ ನೊಂದಾಯಿತ ಕ್ರಯ ಪತ್ರದ ಪ್ರಕಾರ ಹಕ್ಕುಬದಲಾವಣೆ ಮಾಡಲು ದಾಖಲಾದ ತಕರಾರು ಅರ್ಜಿ ವಿಚಾರಣೆ ಕುರಿತು.

*******

ಪೀಠಿಕೆ;

ಹಗರಿಬೊಮ್ಮನಹಳ್ಳಿ ತಾಲೂಕು ಆನೇಕಲ್ಲು ಗ್ರಾಮದ ಸರ್ವೆ ನಂ.96/ಬಿ, ವಿ: 04.05 ಎಕರೆ ಜಮೀನನ್ನು ವಾದಿಯು ಡಾ.ನಂ.ಹೆಚ್.ಬಿ.ಹೆಚ್.1.00059/2016.17; ದಿ:05.04.2016ರ ನೊಂದಾಯಿತ ಕ್ರಯ ಪತ್ರದ ಪ್ರಕಾರ ಕ್ರಯಕ್ಕೆ ಹೊಂದಿದ ದಸ್ತಾವೇಜು ಪ್ರಕಾರ ಹಕ್ಕುಬದಲಾವಣೆ ಮಾಡಲು ಕ್ರಮವಹಿಸಲಾಗಿ ನಿಗದಿತ ಅವಧಿಯೊಳಗೆ 02ನೇ ಪ್ರತಿವಾದಿಯು ತಕರಾರು ಅರ್ಜಿಯನ್ನು ಸಲ್ಲಿಸಿರುವುದರಿಂದ ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಹಕ್ಕು ಬದಲಾವಣೆ ಆದೇಶ ಸಂ/ಹೆಚ್-23/2015-16; ದಿ: .05.16ರ ಪ್ರಕಾರ ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರು ಸಲ್ಲಿಸಿರುತ್ತಾರೆ.

ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರ ಹಕ್ಕುಬದಲಾವಣೆ ಆದೇಶದನ್ವಯ ದಿನಾಂಕ:-28.07.2016 ರಿಂದ ದಿ:23.09.2016ರ ವರೆಗೆ ಉಭಯರಿಗೆ ಕಾಲಾವಕಾಶ ನೀಡಿ ಕರ್ನಾಟಕ ಭೂ ಕಂದಾಯ ಕಾಯ್ದೆ-1964ರ ಕಲಂ129(4)ರನ್ವಯ ವಿಚಾರಣೆ ಮಾಡಲಾಯಿತು, ವಿಚಾರಣೆಗೆ ಉಭಯರು ಹಾಜರಾಗಿರುತ್ತಾರೆ. ನೊಂದಾಯಿತ ಕ್ರಯ ಪತ್ರದ ಪ್ರಕಾರ ಹಕ್ಕುಬದಲಾವಣೆ ಮಾಡಲು ತಕರಾರು ಸಲ್ಲಿಸಿರುವ 02ನೇ ಪ್ರತಿವಾದಿಯನ್ನು ವಿಚಾರಣೆ ಮಾಡಲಾಗಿ ವಿವಾದಿತ ಜಮೀನಿನ ಕ್ರಯ ವ್ಯವಹಾರದ ಬಗ್ಗೆ

ವಿವಾದ ಇರುವುದರಿಂದ ಸದರಿ ಜಮೀನನ್ನು ವಾದಿಯ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಬಾರದೆಂದು ತಕರಾರು ಸಲ್ಲಿಸಲಾಗಿತ್ತು, ಈ ಬಗ್ಗೆ 01ನೇ ಪ್ರತಿವಾದಿಯು ವಾದಿಗೆ ಕ್ರಯಕ್ಕೆ ನೀಡಿರುವ ಕ್ರಯ ದಸ್ತಾವೇಜನ್ನು ಡಾ.ನಂ.ಹೆಚ್.ಬಿ.ಹೆಚ್.1.01708/2016.17; ದಿ:27.07.16ರ ಕ್ರಯ ರದ್ದು ಪತ್ರದ ಪ್ರಕಾರ ಕ್ರಯ ವ್ಯವಹಾರವನ್ನು ರದ್ದುಪಡಿಸಿರುತ್ತಾರೆ. ಕಾರಣ ವಿವಾದಿತ ಜಮೀನನ್ನು ವಾದಿಯ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಬಾರದೆಂದು ಕೋರುತ್ತಾ ಕ್ರಯ ರದ್ದು ಪತ್ರದ ಧೃಡೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

ತಕರಾರುದಾರರು ಹಾಜರುಪಡಿಸಿದ ಕ್ರಯ ರದ್ದು ಪತ್ರದ ದಾಖಲೆಯನ್ನು ಪರಿಶೀಲಿಸಲಾಗಿ, ವಿವಾದಿತ ಜಮೀನನ್ನು ವಾದಿಯು ಕ್ರಯಕ್ಕೆ ಹೊಂದಿದ ಡಾ.ನಂ.ಹೆಚ್.ಬಿ.ಹೆಚ್.1.00059/2016.17; ದಿ:05.04.2016ರ ಕ್ರಯ ವ್ಯವಹಾರವನ್ನು ಡಾ:ನಂ.ಹೆಚ್.ಬಿ.ಹೆಚ್.1.01708/2016.17; ದಿ:27.07.16ರ ಕ್ರಯ ರದ್ದು ಪತ್ರದ ಪ್ರಕಾರ ರದ್ದುಪಡಿಸಿರುವುದು ಕಂಡುಬರುತ್ತದೆ, ಕಾರಣ ಪಹಣಿ ದಾಖಲೆಯಲ್ಲಿ ಯಥಾಸ್ಥಿತಿ ಮುಂದುವರಿಸಲು ಈ ಕೆಳಗಿನಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಗಾಗಿ ಹಾಗೂ ವಾಸ್ತವಾಂಶಗಳ ಹಿನ್ನಲೆಯಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕು ಆನೇಕಲ್ಲು ಗ್ರಾಮದ ಸರ್ವೆ ನಂ.96/ಬಿ, ವಿ: 04.05 ಎಕರೆ ಜಮೀನಿನ ಪಹಣಿ ದಾಖಲೆಯಲ್ಲಿ ಡಾ.ನಂ.ಹೆಚ್.ಬಿ.ಹೆಚ್.1.01708/2016.17; ದಿ:27.07.16ರ ಕ್ರಯ ರದ್ದು ಪತ್ರದ ಪ್ರಕಾರ ಯಥಾಸ್ಥಿತಿ ಮುಂದುವರಿಸಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ತಿದ್ದಿ ದಿನಾಂಕ: 23.09.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

(ಕೆ.ಬಿ.ಆನಂದಪ್ಪನಾಯಕ್)
ತಹಶೀಲ್ದಾರರು
ಹಗರಿಬೊಮ್ಮನಹಳ್ಳಿ

ಗೆ,
ವಾದಿ/ಪ್ರತಿವಾದಿಗೆ

ಪ್ರತಿಯನ್ನು:1.ಶಿರಸ್ತೇದಾರರು ಭೂಮಿ ಕೇಂದ್ರ ತಾಲೂಕು ಕಛೇರಿ ಹಗರಿಬೊಮ್ಮನಹಳ್ಳಿ ಇವರಿಗೆ ಅಗತ್ಯ ಕ್ರಮಕ್ಕಾಗಿ ನೀಡಿದೆ.

2.ಕಂದಾಯ ನಿರೀಕ್ಷಕರು ಹಗರಿಬೊಮ್ಮನಹಳ್ಳಿ ಇವರಿಗೆ ಮಾಹಿತಿಗಾಗಿ ನೀಡಿದೆ.